**ದಿನಾಂಕ 28.10.2024** **ಓ ಎಸ್ 87/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.** **ಪಿಡಬ್ಲ್ಯೂ-1**

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಆರ್ ಪಿ ರವರಿಂದಃ

ಪ್ರಸ್ತುತ ದಾವೆಯಲ್ಲಿ ನಾನು ಸಲ್ಲಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು, ನನ್ನ ತಂದೆ ಮತ್ತು ನನ್ನ ಸಹೋದರರು ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸಾಕ್ಷಿಯು ನಾನು, 1 ಮತ್ತು 2 ನೇ ವಾದಿಯರು ಒಂದೇ ಮನೆಯಲ್ಲಿ ಇದ್ದು, ನನ್ನ ತಂದೆ ಬೇರೆ ಮನೆಯಲ್ಲಿ ವಾಸವಿದ್ದಾರೆ. ನನ್ನ ಅಣ್ಣ 3 ನೇ ಪ್ರತಿವಾದಿ ಶಿವಮೊಗ್ಗದಲ್ಲಿ ವಾಸವಾಗಿದ್ದಾರೆ. ನನಗೆ ವ್ಯವಸಾಯ ಜಮೀನುಗಳನ್ನು ಮಾರಾಟ ಮತ್ತು ಖರೀದಿ ಮಾಡುವ ಬಗ್ಗೆ ನನಗೆ ಮಾಹಿತಿ ಇದೆ. 2020 ಕ್ಕಿಂತ ಪೂರ್ವದಲ್ಲಿ ರೈತರೇ ವ್ಯವಸಾಯದ ಜಮೀನುಗಳನ್ನು ಖರೀದಿ ಮಾಡುವಂತೆ ಮತ್ತು ಇತರೆ ವ್ಯಕ್ತಿಗಳು ಖರೀದಿ ಮಾಡಲು ಅವಕಾಶ ಇರಲಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಅವರು ಟ್ರಾನ್ಸಪೋರ್ಟೇಷನ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿ ಮೂಲತಃ ಬೆಂಗಳೂರಿನವರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಅವರು ಕುಮಾರ ಪಟ್ಟಣದಲ್ಲಿ ವಾಸವಾಗಿದ್ದಾರೆ. 5 ನೇ ಪ್ರತಿವಾದಿ ಅಪಘಾತದಲ್ಲಿ ತಮ್ಮ ಒಂದು ಕಾಲನ್ನು ಕಳೆದುಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಕೇಳಲಾಗಿ ಅದರಲ್ಲಿ ಕಾಣುತ್ತಿರುವ 2 ನೇ ಷಡ್ಯೂಲ್ ದಾವಾ ಮನೆಯಲ್ಲಿ 5 ನೇ ಪ್ರತಿವಾದಿಯು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದರಿಂದ ಸದರಿ ಛಾಯಾಚಿತ್ರವನ್ನು **ನಿಡಿ 6 ಮುಖಾಬಿಲೆಯಾಗಿ** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೆರಡು ಛಾಯಾಚಿತ್ರಗಳನ್ನು ತೋರಿಸಿ ಕೇಳಲಾಗಿ ಅದರಲ್ಲಿ 5 ನೇ ಪ್ರತಿವಾದಿಯು ಮನೆಯ ಮುಂಭಾಗದಲ್ಲಿ ಗೇಟ್ ನ್ನು ಹಾಕಿ, ಅಕ್ಕಪಕ್ಕಕ್ಕೆ ತಗಡು ಗಳನ್ನು ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿಯು ಅವುಗಳನ್ನು ಒಪ್ಪಿದ್ದರಿಂದ **ನಿಡಿ 7 ಮತ್ತು ನಿಡಿ 8 ಎಂದು ಮುಖಾಬಿಲೆಯಾಗಿ** ಗುರುತಿಸಲಾಯಿತು. 2019 ರ ನಂತರ ದಾವಾ 2 ನೇ ಆಸ್ತಿಯಲ್ಲಿ 5 ಪ್ರತಿವಾದಿಯು ಅಡಿಕೆ ಮತ್ತು ಹಣ್ಣಿನ ಗಿಡಗಳನ್ನು ಹಾಕಿಕೊಂಡು ಜಮೀನನ್ನು ಅಭಿವೃದ್ಧಿಗೊಳಿಸಿ, ಒಂದು ಚಿಕ್ಕ ಮನೆಯನ್ನು ಕಟ್ಟಿಕೊಂಡು ಅಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 2 ನೇ ಷಡ್ಯೂಲ್ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ 1 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಮಾಡಿದ ಎಂದು ತೋರಿಸಲು ನನ್ನ ತಂದೆಯಿಂದ ಸಾಕ್ಷ್ಯ ವಿಚಾರಣೆ ಮಾಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನಿಡಿ 5 ದಾಖಲೆಯು ದಾವಾ ಷಡ್ಯೂಲ್ 1 ಮತ್ತು 3 ರ ಆಸ್ತಿಗಳನ್ನು ಮಾತ್ರ ಅಡಮಾನವಿಟ್ಟು ನಿಡಿ 5 ರಂತೆ ಬ್ಯಾಂಕಿನಲ್ಲಿ ಸಾಲವನ್ನು 1 ನೇ ಪ್ರತಿವಾದಿಯು ಪಡೆದಿರುತ್ತಾರ ಎಂದರೆ ಸರಿ. ಸಾಕ್ಷಿಯು ಮುಂದುವರೆದು 2007 ರಲ್ಲಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದು ಆಧಾರ ಖುಲಾಸೆ ಪತ್ರದ ನಕಲು ಪ್ರತಿಯಾಗಿದ್ದು ಅದನ್ನು ಬ್ಯಾಂಕಿನವರು 1 ನೇ ಪ್ರತಿವಾದಿಗೆ 2 ನೇ ಷಡ್ಯೂಲ್ ದಾವಾ ಆಸ್ತಿಯನ್ನು ಬ್ಯಾಂಕಿನ ಸಾಲದಿಂದ ಖುಲಾಸೆ ಮಾಡಿ ಬರೆದುಕೊಟ್ಟ ಪತ್ರ ಎಂದರೆ ಸರಿ ಸಾಕ್ಷಿಯು ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು **ನಿಡಿ 9 ಎಂದು ಮುಖಾಬಿಲೆಯಾಗಿ** ಗುರುತಿಸಲಾಯಿತು. ನಿಡಿ 9 ರಲ್ಲಿ ನನ್ನ ತಂದೆಯ ಸಹಿ ಇದೆ ಎಂದರೆ ಸರಿ. ನನ್ನ ತಂದೆಯು ದಾವಾ 2 ನೇ ಷಡ್ಯೂಲ್ ಆಸ್ತಿಯ ಆಧಾರದ ಮೇಲೆ ಪಡೆದ ಸಾಲವನ್ನು ತಿರುವಳಿ ಮಾಡಲು 5 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ಅದರಿಂದ ಬಂದ ಮುಂಗಡ ಹಣದಿಂದ ಬ್ಯಾಂಕಿನ ಸಾಲವನ್ನು ತಿರುವಳಿ ಮಾಡಿ ನಿಡಿ 9 ರಂತೆ ಬ್ಯಾಂಕಿನಿಂದ ದಾಖಲೆಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಿಡಿ 3 ರಂತೆ ನನ್ನ ತಂದೆ 5 ನೇ ಪ್ರತಿವಾದಿ ಹೆಸರಿಗೆ ನೋಂದಾಯಿತ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಸುಳ್ಳು ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿಯು ವ್ಯವಸಾಯ ಕುಟುಬಂದವರಾಗದೇ ಇದುದ್ದರಿಂದ ನನ್ನ ತಂದೆ ಕ್ರಯ ಪತ್ರ ಮಾಡಲಾಗದೇ ನಿಡಿ 3

ರಂತೆ ನೋಂದಾಯಿತ ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ನಂತರ ನನ್ನ ತಂದೆಯವರಿಗೆ ನಾವು 2 ನೇ ದಾವಾ ಆಸ್ತಿಯ ಮಾರಾಟದ ಕುರಿತು ತಕರಾರು ಮಾಡಿದ್ದರಿಂದ ನನ್ನ ತಂದೆ 5 ನೇ ಪ್ರತಿವಾದಿಯ ಹೆಸರಿಗೆ ನಿಡಿ 4 ರಂತೆ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ ನನ್ನ ತಂದೆಯವರಿಗೆ ನಿಡಿ 4 ರ ಬಗ್ಗೆ ನಾವು ತಕರಾರು ಮಾಡಿದ್ದರಿಂದ, ನನ್ನ ತಂದೆಯು ನಿಪಿ 6 ರಂತೆ 4 ನೇ ಪ್ರತಿವಾದಿಯಿಂದ ಹಣವನ್ನು ಪಡೆದು ಅವರ ಹೆಸರಿಗೆ 2 ನೇ ಷಡ್ಯೂಲ್ ಆಸ್ತಿಯನ್ನು ನೋಂದಣಿ ಕ್ರಯ ಪತ್ರದ ಮೂಲ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 5 ನೇ ಪ್ರತಿವಾದಿಯು 2 ನೇ ದಾವಾ ಷಡ್ಯೂಲ್ ಆಸ್ತಿಯನ್ನು ಸಂಪೂರ್ಣವಾಗಿ ಅಭಿವೃದ್ಧಿಗೊಳಿಸಿ, ವಾಸ ಮಾಡುತ್ತಿದ್ದುದ್ದನ್ನು ನೋಡಿ ನಾವು ಸಹಿಸದೇ ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಈ ಪ್ರಸ್ತುತ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ